ಕೋಲಾರ ಡಿಸ್ಟ್ರಿಕ್ಟು.

ಫಾರೆಸ್ಟ್ ಇಲಾಖೆ.

ಇಸ್ತಿಹಾರ್.

ತಾರೀಖು 11ನೇ ಆಗಸ್ಟ್ 1896.

ಸನ್ 1896—97ನೇ ಸಾಲಿಗೆ ಕೋಲಾರ ಡಿಸ್ಟ್ರಿಕ್ಟಿನಲ್ಲಿ ಇರುವ ಡಿಸ್ಟ್ರಿಕ್ಟು ಮತ್ತು ಸ್ಟೇಟ್ ಫಾರೆಸ್ಟುಗಳಲ್ಲಿಯೂ ಮತ್ತು ಪ್ಲಾಂಟೇಷ್ಣಗಳಲ್ಲಿಯೂ ದೊರೆಯುವ ಈ ಕೆಳಗೆ ನಮೂದು ಮಾಡಲ್ಪಟ್ಟ ಪಸಾರಜಿನಸುಗಳನ್ನು ಜಮಾಯಿಸಿಕೊಳ್ಳುವ ಹಕ್ಕುದಾರಿಯು ಈ ಕೆಳಗೆ ಕಂಡ ತಖ್ತೆಯಲ್ಲಿ ನಮೂದುಮಾಡಲ್ಪಟ್ಟಿರುವ ತಾರೀಖುಗಳಲ್ಲಿಯೂ ಸ್ಥಳಗಳಲ್ಲಿಯೂ ಮತ್ತು ಆಫೀಸರರಿಂದಲೂ ತಾಲ್ಲೂಕುವಾರಾಗಿಯಾಗಲಿ ಅಥವಾ ಹೋಬಳಿವಾರಾಗಿಯಾಗಲಿ ಅಥವಾ ಮತ್ತೊಂದು ರೀತಿಯಾಗಿಯಾಗಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಹರಾಜು ಪ್ರತಿದಿವಸವಲ್ಲಿಯೂ 12 ಘಂಟೆ ಲಾಗಾಯ್ತು ನಡಿಸಲ್ಪಡುವದು.

ನಂಬರು.	ತಾಲ್ಲೂಕಿನ ಹೆಸರು.	ಸ್ಥಳ.	ಹರಾಜು ತಾರೀಖು.	ಹರಾಜು ಸ್ಥಳ.	ಹರಾಜು ಮಾಡುವ ಆಫೀಸರವರು.
1	ಕೋಲಾರ	ಎಲ್ಲಾ ಡಿಸ್ಟ್ರಿಕ್ಟು ಫಾರೆಸ್ಟುಗಳು ಗಾಜಲ್‌ದಿನ್ನೆ ಪ್ಲಾಂಟೇಷ್ಣ ಸಂಗೊಂಡಹಳ್ಳಿ ಡಿಟೋ ಬಯ್ಯಪ್ಪನಹಳ್ಳಿ ಡಿಟೋ	14ನೇ ಸೆಪ್ಟಂಬರ್ 1896ನೇ ಇಸವಿ	ಕೋಲಾರ ತಾಲ್ಲೂಕು ಕಛೇರಿ	ಕೋಲಾರ ತಾಲ್ಲೂಕು ಅಮಲ್‌ದಾರು. ಫಾರೆಸ್ಟು ರೇಂಜರು, ಮಾಲೂರು ಅಮಲ್‌ದಾರು ಸಹ.
2	ಬೌರಿಂಪೇಟೆ	ಎಲ್ಲಾ ಡಿಸ್ಟ್ರಿಕ್ಟು ಫಾರೆಸ್ಟುಗಳು ಕಾವಮಸಮುದ್ರ ಸ್ಟೇಟ್‌ಫಾರೆಸ್ಟು ಮತ್ತು ಇದರಲ್ಲಿರಬಹುದಾದ ಪ್ಲಾಂಟೇಷ್ಣಗಳು ಕಾರಬಲೆ ಪ್ಲಾಂಟೇಷ್ಣ	16ನೇ ಸೆಪ್ಟಂಬರ್ 1896ನೇ ಇಸವಿ	ಬೌರಿಂಗ್‌ಪೇಟೆ ತಾಲ್ಲೂಕು ಕಛೇರಿ	ಬೌರಿಂಗ್‌ಪೇಟೆ ತಾಲ್ಲೂಕು ಅಮಲ್‌ದಾರು. ಫಾರೆಸ್ಟು ರೇಂಜರು, ಮಾಲೂರು ಅಮಲ್‌ದಾರು ಸಹ.
3	ಮಾಲೂರು	ಎಲ್ಲಾ ಡಿಸ್ಟ್ರಿಕ್ಟು ಫಾರೆಸ್ಟುಗಳು ತಾಲ್ಲೂಕು ಕಛೇರಿ ಕಾಂಪೌಂಡಿನಲ್ಲಿರುವ ಪ್ಲಾಂಟೇಷ್ಣ ಬೆಳ್ಳಾವಿ ಪ್ಲಾಂಟೇಷ್ಣ ದಿನ್ನೇರಿ ಡಿಟೋ ಕಾಡುಮುತ್ಸಂದ್ರ ಡಿಟೋ ಹಳೆಕುರಂಡಹಳ್ಳಿ ಡಿಟೋ ಹೊಸಕುರಂಡಹಳ್ಳಿ ಡಿಟೋ ನುಲ್ಲಪ್ಪನಹಳ್ಳಿ ಡಿಟೋ ಮೂರಸಂದ್ರ ಡಿಟೋ ರಾಮಚಂದ್ರಪುರ ಡಿಟೋ ಎಸವಂತಪುರ ಡಿಟೋ ಲಕ್ಷ್ಮೀಸಾಗರ ಡಿಟೋ ವಕ್ಕಲೇರಿ ಡಿಟೋ	19ನೇ ಸೆಪ್ಟಂಬರ್ 1896ನೇ ಇಸವಿ	ಮಾಲೂರು ತಾಲ್ಲೂಕು ಕಛೇರಿ	ಮಾಲೂರು ತಾಲ್ಲೂಕು ಅಮಲ್‌ದಾರು. ಫಾರೆಸ್ಟು ರೇಂಜರು, ಮಾಲೂರು ಅಮಲ್‌ದಾರು ಸಹ.
4	ಮುಳಬಾಗಲು	ಎಲ್ಲಾ ಡಿಸ್ಟ್ರಿಕ್ಟು ಫಾರೆಸ್ಟುಗಳು ಆಗರಸ್ಟೇಟ್ ಫಾರೆಸ್ಟು ಮತ್ತು ಇದರಲ್ಲಿರುವ ಪ್ಲಾಂಟೇಷ್ಣಗಳು ಕಾಶೀಪುರ ಪ್ಲಾಂಟೇಷ್ಣಗಳು	23ನೇ ಸೆಪ್ಟಂಬರ್ 1896ನೇ ಇಸವಿ	ಮುಳಬಾಗಲು ತಾಲ್ಲೂಕು ಕಛೇರಿ	ಮುಬಾಗಲು ತಾ|| ಅಮಲ್‌ದಾರು. ಫಾರೆಸ್ಟು ರೇಂಜರು, ಶ್ರೀನಿವಾಸಪುರ ಅಮಲ್‌ದಾರು ಸಹ.
5	ಶ್ರೀನಿವಾಸಪುರ ಸಬ್ ತಾಲ್ಲೂಕು	ಎಲ್ಲಾ ಡಿಸ್ಟ್ರಿಕ್ಟು ಫಾರೆಸ್ಟುಗಳು ಶ್ರೀನಿವಾಸಪುರ ಫಾರೆಸ್ಟು ಮತ್ತು ಇದರಲ್ಲಿರುವ ಪ್ಲಾಂಟೇಷ್ಣಗಳು ರಾಯಲ್‌ಪಾಡು ಫಾರೆಸ್ಟ್ ಡಿಟೋ	25ನೇ ಸೆಪ್ಟಂಬರ್ 1896ನೇ ಇಸವಿ	ಶ್ರೀನಿವಾಸಪುರ ತಾಲ್ಲೂಕು ಕಛೇರಿ	ಶ್ರೀನಿವಾಸಪುರ ಡೆಪ್ಯೂಟಿ ಅಮಲ್‌ದಾರು. ಫಾರೆಸ್ಟು ರೇಂಜರು, ಶ್ರೀನಿವಾಸಪುರ ಅಮಲ್‌ದಾರು ಸಹ.

ನಂಬರು.	ತಾಲ್ಲೂಕಿನ ಹೆಸರು.	ಸ್ಥಳ.	ಹರಾಜ್ ತಾರೀಖು.	ಹರಾಜ್ ಸ್ಥಳ.	ಹರಾಜ್ ಮಾಡುವ ಆಫೀಸರವರು.
6	ಚಿಂತಾಮಣಿ ..	ಎಲ್ಲಾ ಡಿಸ್ಟ್ರಿಕ್ಟ್ ಫಾರೆಸ್ಟ್ಗಳು .. ಕೋನಪಲ್ಲಿ ಪ್ಲಾಂಟೇಷ್ಣ .. ಅಡ್ಡಗಲ್ ನೆಲವಂಕಿ ಸ್ಟೇಟ್ಫಾರೆಸ್ಟ್ ಮತ್ತು ಇದರಲ್ಲಿರುವ ಪ್ಲಾಂಟೇಷ್ಣಗಳು.	28ನೇ ಸೆಪ್ಟೆಂಬರ್ 1896ನೇ ಇಸವಿ	ಚಿಂತಾಮಣಿ ತಾಲ್ಲೂಕು ಕಛೇರಿ	ಚಿಂತಾಮಣಿ ತಾಲ್ಲೂಕು ಅಮಲ್ದಾರು. ಫಾರೆಸ್ಟ್ ರೇಂಜರು, ಶ್ರೀನಿವಾಸಪುರ ಅಮಲ್ದಾರು ಸಹ.
7	ಶಿಡ್ಲಘಟ್ಟ ..	ಎಲ್ಲಾ ಡಿಸ್ಟ್ರಿಕ್ಟ್ ಫಾರೆಸ್ಟ್ಗಳು .. ಪಟ್ಯಪ್ಪಲ್ಲಿ ಪ್ಲಾಂಟೇಷ್ಣ .. ತಿರುಮಲಿಗಾನದಿನ್ನೆ ಡಿಟೋ .. ಚೌಡನಂದ್ರ ಡಿಟೋ .. ಗೊರ್ರಮಡಗು ಡಿಟೋ .. ಜಂಗಮಕೋಟೆ ಡಿಟೋ .. ಚಿಕ್ಕಹಾರಡಿ ಡಿಟೋ .. ದೊಡ್ಡಹಾರಡಿ ಡಿಟೋ ..	30ನೇ ಸೆಪ್ಟೆಂಬರ್ ಮತ್ತು 1ನೇ ಅಕ್ಟೋಬರ್ 1896ನೇ ಇಸವಿ	ಶಿಡ್ಲಘಟ್ಟ ತಾಲ್ಲೂಕು ಕಛೇರಿ	ಶಿಡ್ಲಘಟ್ಟ ತಾಲ್ಲೂಕು ಅಮಲ್ದಾರು. ಫಾರೆಸ್ಟ್ ರೇಂಜರು, ಚಿಕ್ಕಬಳ್ಳಾಪುರ ಅಮಲ್ದಾರು ಸಹ.
8	ಚಿಕ್ಕಬಳ್ಳಾಪುರ.	ಎಲ್ಲಾ ಡಿಸ್ಟ್ರಿಕ್ಟ್ ಫಾರೆಸ್ಟ್ಗಳು. .. ಸುಲ್ತಾಲಪ್ಪನದಿನ್ನೆ ಪ್ಲಾಂಟೇಷ್ಣ .. ನರಸಿಹ್ಮದೇವರಪಟ್ಟ ಫಾರೆಸ್ಟ್ 2 ಮತ್ತು 3ನೇ ಬ್ಲಾಕುಗಳು ಮತ್ತು ಇದರಲ್ಲಿರುವ ಪ್ಲಾಂಟೇಷ್ಣಗಳು .. ನಂದೀ ಸ್ಟೇಟ್ಫಾರೆಸ್ಟ್ ಡಿಟೋ .. ಕಾವಮಿಟ್ಟಬಳ್ಳಿ ಪ್ಲಾಂಟೇಷ್ಣ .. ಸಂಬಾರಗಿಡ ಕಾವಲ್ ಡಿಟೋ ..	4ನೇ ಅಕ್ಟೋಬರ್ 1896ನೇ ಇಸವಿ	ಚಿಕ್ಕಬಳ್ಳಾಪುರ ತಾಲ್ಲೂಕು ಕಛೇರಿ	ಚಿಕ್ಕಬಳ್ಳಾಪುರ ತಾಲ್ಲೂಕು ಅಮಲ್ದಾರು. ಫಾರೆಸ್ಟ್ ರೇಂಜರು, ಚಿಕ್ಕಬಳ್ಳಾಪುರ ಅಮಲ್ದಾರು ಸಹ.
9	ಗೋರೀಬಿದನೂರು.	ಎಲ್ಲಾ ಡಿಸ್ಟ್ರಿಕ್ಟ್ ಫಾರೆಸ್ಟ್ಗಳು .. ನರಸಿಹ್ಮದೇವರಪಟ್ಟ ಫಾರೆಸ್ಟ್ 4ನೇ ಬ್ಲಾಕು ಮತ್ತು ಇದರಲ್ಲಿರುವ ಪ್ಲಾಂಟೇಷ್ಣಗಳು .. ವಲಸೆ ಫಾರೆಸ್ಟ್ ಡಿಟೋ ..	8ನೇ ಅಕ್ಟೋಬರ್ 1896ನೇ ಇಸವಿ	ಗೋರಿಬಿದನೂರು ತಾಲ್ಲೂಕು ಕಛೇರಿ	ಗೋರಿಬಿದನೂರು ತಾಲ್ಲೂಕು ಅಮಲ್ದಾರು ಫಾರೆಸ್ಟ್ ರೇಂಜರು, ಚಿಕ್ಕಬಳ್ಳಾಪುರ ಅಮಲ್ದಾರು ಸಹ.
10	ಗುಡಿಬಂಡೆ ಸಬ್ ತಾಲ್ಲೂಕು ..	ಎಲ್ಲಾ ಡಿಸ್ಟ್ರಿಕ್ಟ್ ಫಾರೆಸ್ಟ್ಗಳು .. ಬೀಜೆಗಾನಪಲ್ಲಿ ಪ್ಲಾಂಟೇಷ್ಣ .. ನರಸಿಹ್ಮದೇವರಪಟ್ಟ ಫಾರೆಸ್ಟ್ 5ನೇ ಬ್ಲಾಕು ಮತ್ತು ಇದರಲ್ಲಿರುವ ಪ್ಲಾಂಟೇಷ್ಣಗಳು ..	10ನೇ ಅಕ್ಟೋಬರ್ ಇಂದ 13ನೇ ಅಕ್ಟೋಬರ್ 1896ನೇ ಇಸವಿ	ಗುಡಿಬಂಡೆ ತಾಲ್ಲೂಕು ಕಛೇರಿ	ಗುಡಿಬಂಡೆ ಡೆಪ್ಯೂಟಿ ಅಮಲ್ದಾರು. ಫಾರೆಸ್ಟ್ ರೇಂಜರು, ಬಾಗೇಪಲ್ಲಿ ಅಮಲ್ದಾರು ಸಹ.
	ಬಾಗೇಪಲ್ಲಿ ..	ಎಲ್ಲಾ ಡಿಸ್ಟ್ರಿಕ್ಟ್ ಫಾರೆಸ್ಟ್ಗಳು .. ಎಲ್ಲಂಪಲ್ಲಿ ಪ್ಲಾಂಟೇಷ್ಣ .. ಇಟ್ಟಿಕಲ್ದುರ್ಗ ಫಾರೆಸ್ಟ್ ..	13ನೇ ಅಕ್ಟೋಬರ್ ಇಂದ 15 1896ನೇ ಇಸ ಇ	ಬಾಗೇಪಲ್ಲಿ ತಾಲ್ಲೂಕು ಕಛೇರಿ	ಬಾಗೇಪಲ್ಲಿ ತಾಲ್ಲೂಕು ಅಮಲ್ದಾರು ಡಿಟೋ ಮತ್ತು ಫಾರೆಸ್ಟ್ ರೇಂಜರು, ಬಾಗೇಪಲ್ಲಿ ಅಮಲ್ದಾರು ಸಹ.

ಪಸಾರೆಜಿನೆಸಿಗಳ ವಿವರ.

1. ಜೇನು, 2. ಜೇನುಮೇಣ, 3. ಕಪಿಲಾರಂಗು, 4. ಗೇರುಪಪ್ಪು, 5. ಹುಣಸೇಹಣ್ಣು, 6. ಹೊಂಗೇಕಾಯಿ, 7. ಬ್ಯಾಲದ ಹಣ್ಣು, 8. ಕಲ್ಲುಹೂವು, 9. ಕಾಡುಹರಳು, 10. ಗೋಂದು, 11. ಮರಡಿಪಪ್ಪು, 12. ತಿಗೇಕಾಯಿ, 13. ತಾರೇಕಾಯಿ, 14. ಪಿಳ್ಳಿಚಕ್ಕೆ, 15. ಅಳಲೇಕಾಯಿ. 16. ನೀತಾಫಲ.

2. ಚಿಡದರಖಾಸ್ತುದಾರರು ಹರಾಜು ಖೈದಾದ ಕೂಡ್ಲೆ ದರಾಣಿ ಮೊಬಲಗು ಪೈಕಿ ಕಾಲುಹಿಸ್ಸೆಯನ್ನು ಠೇವಣಿ ಕಟ್ಟತಕ್ಕದ್ದು. ಇದಕ್ಕೆ ತಪ್ಪಿದರೆ ಅವರನ್ನು ಸಸ್ಪೆಂಡ್ಗೆ ಗುರಿಮಾಡಿ ಬಾಬು ಮುಸರಾ ಹರಾಜುಮಾಡಲ್ಪಡುವದು. ಆದರೆ ಅದರಿಂದ ಉಂಟಾಗುವ ಆದಾಯದಲ್ಲಿ ಸದರೀಯವರಿಗೆ ಏನೂ ದೊರಿಯುವಾರದು. ಹರಾಜು ಮುಂಜೂರಾದ ಸಂಗತಿಯನ್ನು ಚಿಡದಸವಾಲ್ದಾರ್ರಿಗೆ ತಿಳಿಸಿದ

ಮುಂದು ವಾರದೊಳಗಾಗಿ ಬಾಕಿ ಮುಕ್ತಾಲು ಹಿಸ್ಸೆ ಮೊಬಲಗನ್ನು ಸದರೀಯವರು ಪಾವತೀ ಮಾಡತಕ್ಕದ್ದು. ಅಷ್ಟರಲ್ಲೆ ಹಣ ಪಾವತಿ ಮಾಡಲು ತಪ್ಪಿದರೆ ದರಖಾಸ್ತುದಾರು ಮೊದಲು ಪಾವತಿ ಮಾಡಿದ ಕಾಲು ಹಿಸ್ಸೇ ತೇವಣಿ ಮೊಬಲಗು ಸರಕಾರಕ್ಕೆ ದಂಡವಾಗಿ ಕೇರಿಸಿಕೊಳ್ಳಲ್ಪಡುವಲ್ಲದೆ ಹರಾಜಿನಲ್ಲಿ ಪಡದ ಹಕ್ಕನ್ನು ತಪ್ಪಿಸಲಾಬೀತು. ಪೂರಾ ಮೊಬಲಗು ಪಾವತಿಯಾದ ನಂತರ ಹರಾಜುಕಾಲದಲ್ಲಿ ಶಾಮಿಲಿ ಆಗುವ ಷರತ್ತುಗಳ ಕಂಡು ದರಖಾಸ್ತುದಾರರು ಕರಾರು ಬರದು ಕೊಡಬೇಕಾಗಿಧೆ. ಇದಕ್ಕೆ ತಪ್ಪಿದರೆ ಜಿನಿಸಿಯನ್ನು ರೂಢಿಸಲು ಅಪ್ಪಣೆ ಕೊಡಲ್ಪಡಲಾರದು, ಪೂರಾ ಹರಾಜು ಮೊಬಲಗಿನ ಮೇಲಿ ರೂಪಾಯಿಗೆ ಒಂದು ಆಣೆಯಂತೆ ಲೋಕಲ್ ಸಸ್ ಕೊಡತಕ್ಕದ್ದು.

3. ಹರಾಜು ಡಿಪ್ಯುಟಿ ಕಮ್ಮಿಷನರವರ ಮಂಜೂರಾತಿಗೆ ಒಳಪಟ್ಟಿರುತ್ತೆ.

4. ಇಜಾರೇದಾರರು ಹಿಡುವಳಿ ಜಮೀನಿನಲ್ಲಿರತಕ್ಕ ಮರಗಳ ಮತ್ತು ಸ್ವಂತ ಅಮರಾಯಿಗಳಲ್ಲಿ ದೊರಿಯುವ ಫಸಲನ್ನು ರೂಢಿಸಲು ಹಕ್ಕು ಇರುವದಿಲ್ಲ.

5. ಇನಾಂದಾರರ ಸ್ಥಿರಪಟ್ಟಿ ಹಕ್ಕುದಾರಿಗೆ ಇಜಾರೇದಾರರು ಪ್ರವೇಶಿಸಕೂಡದು.

6. ಗ್ರಾಮ ಅಮರಾಯಿ ಫಲ ಹುಟ್ಟುವಳಿಯು ಮೇಲ್ಕಂಡ ಇಜಾರೆಯಲ್ಲಿ ಅಡಗಿರುವದಿಲ್ಲ.

7. ದರಖಾಸ್ತುದಾರರು ತಕ್ಕ ಸವಾಲ್ ಮಾಡದೆ ಹೋದರೆ ಹರಾಜು ಮಾಡುವ ಆಫೀಸರರು ಹರಾಜು ನಿಲ್ಲಿಸುವದಕ್ಕೂ ಅಥವಾ ಮುಂದೆ ಮತ್ತೊಂದು ವೇಳೆ ಹರಾಜು ಮಾಡುವದಕ್ಕೂ ಸ್ವತಂತ್ರರಾಗಿರುತ್ತಾರೆ.

ಬಿ. ರಾಮಸ್ವಾಮಿ ಅಯ್ಯರ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್.

ತಾರೀಖು 8ನೇ ಆಗಸ್ಟ್ 1896.

ಸ್ಥಿರಸ್ವತ್ತಿನ ಹರಾಜು ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧ ಪತ್ರಿಕೆ.

1. ಜೋಡಿ ಬಾಕಿದಾರರಾದ ಹನುಮಂತಾಚಾರ್ರು ವಗೈರೆರಿಂದ ಬರಬೇಕಾದ ನೀರಸರದಿ ಬಾಕಿಗಾಗಿ ಇದರಡಿ ನಮೂದಾಗುವ ಫಾರ್ಫಿಟ್ಟಾದ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟ್ ಚಿಕ್ಕಬಳ್ಳಾಪುರ ತಾಲ್ಲೂಕು ಅಮಲೆ ದಾವ್ರ ಕಚೇರೀಲಿ 1896ನೇ ಸೆಪ್ಟಂಬರ್ 26ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1895–96ನೇ ಸಾಲಿಗೆ ಪೂರ್ತಿಯಾಗಿ* ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಪ್ಶೀಯಲ್ಲಿ ನಮೂದಿಸಿರುವ ತಪ್ಶೀಲ್ ಮೇರಿಗೆ 96–12–5 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜು ಮೊಬಲಗಿನ ಶೇಕಡಾ 25 ರೂಪಾಯಿಯನ್ನು ಡಿಪಾಜಿಟ್ ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯ್ತು ದಿವಸಗಳಲ್ಲಿ ಪಾವತಿ ಮಾಡಲ್ಪಡಬೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ ಮೊಬಲಗನ್ನು ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಪೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟ್ ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನು ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಆದನ್ನು ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕಿದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯೂಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜು ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯೂಟಿ ಕಮ್ಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯೂಟಿ ಕಮ್ಮಿಷನರವರಿಂದ ಸೈ ಮೊಹರ್ ಮಾಡಲ್ಪಟ್ಟ ಒಂದು ಹರಾಜು ಸರಟಿಫಿಕೇಟು ಅವನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಲಿತ್ಯಗಳಿಗೆ ಗವರ್ಮೆಂಟಿನವರು ಜವಾಬ್ದಾರ್ಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ ತಾರೀಖು ಲಾಗಾಯ್ತು 30 ದಿವಸಗಳಲ್ಲಿ ಡೆಪ್ಯೂಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಒದ್ದಾವಾಗಿರತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕಿದಾರನ ಹೆಸರು.	ಸ್ವತ್ತಿನ ತಪ್ಪೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜಾ ಕಿಮ್ಮತ್ತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಖುಷ್ಕೀ ತರೀ ಅಥವಾ ಬಾಗಾಯತು.	ವಿಸ್ತೀರ್ಣ.	ಪ್ರಕಾರ.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ಸ್ಟ್ಯಾಂಪ್ ಸಹಿತವಾದ ಬಾಕಿ ಮೊಬಲಗು.
1	2	3	4	5	6	7	8	9	10	11
				ರೂ. ಆ. ಪೈ.				ಎಕರೆ. ಗುಂಟೆ.	ರೂ. ಆ. ಪೈ.	ರೂ. ಆ. ಪೈ.
ಚಿಕ್ಕಬಳ್ಳಾಪುರ.	ಚಿಕ್ಕಬಳ್ಳಾಪುರ.	ಜೋಡಿ ಮೊನ್ನೇನಹಳ್ಳಿ ಗ್ರಾಮ.	ಹನುಮಂತಾಚಾರ್ಯ ವಗೈರೆ	.. .. ..		ಗ್ರಾಮದಲ್ಲಿ ಬಾಕಿದಾರ್ಗೆ ಇರುವ ಹೊಲಗಳು.	ಖುಷ್ಕೀ ತರೀ ಬಾಗಾಯತು ಪರಂಪೋಕು	299 11 20 13 38 26 78 20	596 4 0	96 0 5
							ಟೋಟಲ್	436 30		ನೋಟಿಸ್ ಫೀ ವಗೈರೆ 0–12–0
							ಸಾಲಿನಾ ಸರ್ಕಾರಕ್ಕೆ ಕೊಡತಕ್ಕ ಜೋಡಿ	.. ..	ನೀರ್ ಸರದಿ .. 136 0 0	96–12–5 ಹರಾಜ್ ತಾರೀಕ್ ವರಿಗೆ ಬಡ್ಡಿ ಕೊಡಬೇಕು.

ಸಿ. ಮಾದಯ್ಯ,
ಡೆಪ್ಯೂಟಿ ಕಮ್ಮಿಷನರ್.

ತುಮಕೂರು ಡಿಸ್ಟ್ರಿಕ್ಟು.

ತಾರೀಖು 3ನೇ ಆಗಸ್ಟ್ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—

ಸ್ ೧೮೯೬–97ನೇ ಸಾಲಿಗೆ, ಅಂದರೆ 1896ನೇ ಜುಲೈ ಗುರ್ರೇ ಲಾಗಾಯತು 1897ನೇ ಜೂ ವರಿಗೆ, ತುಮಕೂರು ತಾಲ್ಲೂಕಿನಲ್ಲಿರುವ ಕುರಂಗದ ಕಲ್ಲು ಜಮೀನಿಸತಕ್ಕ ಹಕ್ಕನ್ನ ತುಮಕೂರು ತಾಲ್ಲೂಕು ಕಛೇರಿಯಲ್ಲಿ 1896ನೇ ಸೆಪ್ಟಂಬರ್ 4ನೇ ತಾರೀಖಿನ ಬೆಳಿಗ್ಗೆ 11 ಘಂಟೆಗೆ ಹರಾಜ್ ಮೂಲಕ ವಿಕ್ರಯಿಸಲ್ಪಡುತ್ತೆ.